ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಮಾಜ ಸೇವಾ ಸಂಘ (ರಿ),ಸುಳ್ಯ ದ.ಕ
website :www.sthanikasamjasullia.webs.com



# ಸ್ಥಾನಿಕ ಸಂಪದ





LICENCED TO POST
Without Prepayment Lience
No: PTR /117/2018-20
Date of Posting 16th of every month
OFFICE OF POSTING SULLIA P.O
DATE OF PUBLICATION 15th every month

ಸಂಪುಟ : 9
ಸಂಚಿಕೆ : 07

ಜುಲೈ : 2018
ಪುಟಗಳು : 6

## ಶ್ರೀ ಶ್ರೀ ಜಗದ್ಗುರುಗಳ ಅನುಗ್ರಹ ಸಂದೇಶ

## ಶಾಸ್ತ್ರ ಪಾಲನೆ

ಶಾಸ್ತ್ರ ಮತ್ತು ಶ್ರುತಿ,ಪುರಾಣ ಹಾಗೂ ಇತಿಹಾಸಗಳು ಮನುಕುಲಕ್ಕೆ ಅತ್ಯಂತ ಉಪಯುಕ್ತವಾದವುಗಳು.ಜೀವನವನ್ನು ನಡೆಸುವ ಮಾರ್ಗವನ್ನು ಅವುಗಳು ಭೋದಿಸುತ್ತವೆ, ಅವುಗಳು ತಿಳಿಸುವ ವಿಧಿ,ನಿಷೇಧಗಳು ಎಲ್ಲರ ಒಳಿತಿಗಾಗಿಯೇ ಇರುತ್ತವೆ.ಇವುಗಳನ್ನು ರಚಿಸಿದ ಮಹಾತ್ಮರಿಗೆ ಯಾವುದೇ ಸ್ವಾರ್ಥಬುದ್ಧಿ ಇರಲಿಲ್ಲ. ಏನನ್ನಾದರೂ ಪಡೆದುಕೊಳ್ಳಬೇಕೆಂಬ ಆಕಾಂಕ್ಷೆಯೂ ಅವರಿಗೆ ಇರಲಿಲ್ಲ.

ಈ ಕಲಿಯುಗದಲ್ಲಿ ಮನಸ್ಸಿನ ಮೇಲೆ ಹತೋಟಿಯಿಲ್ಲದ ಮತ್ತು ನಿಸ್ತೇಜವಾದ ಇಂದ್ರಿಯ ಗ್ರಹಣ ಸಾಮರ್ಥ್ಯದಿಂದ ಬಳಲುತ್ತಿರುವ ಮಾನವರ ಏಳಿಗೆಗಾಗಿ ಮಹಾತ್ಮರು ಈ ಕೃತಿಗಳನ್ನು ರಚಿಸಿರುವರು. ಉದಾಹರಣೆಗೆ ಮನಸ್ಸನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲಾರದವನು, ತಾನು ನಡೆಸುತ್ತಿರುವ ರಥದ ಕುದುರೆಯನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲಾರದವನು, ತಾನು ನಡೆಸುತ್ತಿರುವ ರಥದಿಂದ ಬಿದ್ದು ತೀವ್ರವಾಗಿ ಪೆಟ್ಟು ತಿನ್ನುವವನಂತೆ ಆಗುತ್ತಾನೆ ಎಂದು ಶಾಸ್ತ್ರಗಳು ಎಚ್ಚರಿಕೆಯನ್ನು ನೀಡುತ್ತವೆ .

ಏತನ್ಯನಿಗೃಹೀತಾನಿ ವ್ಯಾಪಾದಯಿತುಮಪ್ಯಲಮ್
ಅವಿಧೇಯಾ ಇವಾದಾನ್ತಾ ಹಯಾಃ ಪಥಿಕುಸಾರಥಿಮ್

ಈ ರೀತಿಯಾಗಿ ಗುರುವಿನ ಮುಖಾಂತರವಾಗಿ ಶಾಸ್ತ್ರಗಳು ಅನೇಕ ಉಪದೇಶಗಳನ್ನು ಮಾನವನ ಒಳಿತಿಗಾಗಿ ಮಾಡುತ್ತವೆ. ಆದುದ-ರಿಂದ , ಸಾಧ್ಯವಾದಷ್ಟು ಮಟ್ಟಿಗೆ ಮನುಷ್ಯನು ಶಾಸ್ತ್ರಗಳ ಆದೇಶಗಳನ್ನು ಪಾಲಿಸಬೇಕು.ಇದರಿಂದ ವ್ಯಕ್ತಿಯೊಬ್ಬನಿಗೆ ಮಾತ್ರವಲ್ಲದೆ,ಇತರ ಅನೇಕರಿಗೂ ಶಾಸ್ತ್ರಪಾಲನೆಯಿಂದ ಒಳಿತೇ ಆಗುತ್ತದೆ. ಆದುದ-ರಿಂದ ಸಮಯವನ್ನು ವ್ಯರ್ಥಮಾಡದೆ ಮನುಷ್ಯನು ಶಾಸ್ತ್ರಗಳ ಅಧ್ಯಯನವನ್ನು ಮಾಡಬೇಕು.

ವ್ಯರ್ಥವಾದ ಕ್ಷಣವನ್ನು ಎಷ್ಟೇ ಚಿನ್ನದ ನಾಣ್ಯಗಳನ್ನು ಸುರಿದರೂ ಮರಳಿ ಗಳಿಸಲಾಗುವುದಿಲ್ಲ. ಜ್ಞಾನ ಮಾರ್ಗವನ್ನು ಅನುಸರಿಸದೇ ಇರುವುದಕ್ಕಿಂತ ಹೆಚ್ಚಿನ ನಷ್ಟವು ಯಾವುದಿದೆ? ಎಂದು ಶ್ರೀ ಶಂಕರ ಭಗವತ್ಪಾದರು ಪ್ರಶ್ನಿಸುತ್ತಾರೆ.

ಆಯುಃಕ್ಷಣಲವಮಾತ್ರಂ ನ ಲಭ್ಯತೇ ಹೇಮಕೋಟಿಭಿಃ ಕ್ವಾಪಿ
ತಚ್ಚೇದ್ಗಚ್ಛತಿ ಸರ್ವಂ ಮೃಷಾ ತತಂ ಕಾಧಿಕಾ ಹಾನಿ?ಃ

ಈ ವಿಷಯದಲ್ಲಿ ನಮ್ಮ ಆಶೀರ್ವಾದವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು.



Scanned by CamScanner

**ಸಂಪಾದಕೀಯ**

## ಚತುರ್ವಿಧ ಸೂತ್ರ

ಡಾ.ಸದಾಶಿವ ರಾವ್
ಜ್ಯೋತಿ ಆಸ್ಪತ್ರೆ ,ಸುಳ್ಯ
sadashiva.dr@gmail.



ಆಧ್ಯಾತ್ಮಿಕ ಪ್ರಗತಿಯನ್ನು ಪಡೆಯಬಯಸುವವರು ಕನಿಷ್ಠ ಮಟ್ಟದ ಅನುಷ್ಠಾನವನ್ನಾದರೂ ಇಟ್ಟುಕೊಳ್ಳಬೇಕು.ಇದಕ್ಕೆ ನಾಲ್ಕು ಅಂಶಗಳನ್ನೊಳಗೊಂಡ ಆಧ್ಯಾತ್ಮಿಕ ಸೂತ್ರವೊಂದು ನಾಲ್ಕು ಗಕಾರಗಳನ್ನು ಸೂಚಿಸಿದೆ–ಗ,ಗಾ,ಗೀ,ಗೋ.

ಗ' ಎಂದರೆ ಗಂಗಾಸ್ನಾನ .ದಿನನಿತ್ಯ ಗಂಗೆಯನ್ನು ಸ್ಮರಿಸಿಕೊಂಡು ಸ್ನಾನ ಮಾಡಿದರೆ .ಅವಳು ಅದರಲ್ಲಿ ಸನ್ನಿಹಿತಳಾಗುತ್ತಾಳೆ. 'ಗಾ' ಎಂದರೆ ಗಾಯತ್ರಿ . ಸ್ನಾನ ಮಾಡಿದ ಬಳಿಕ ಲೌಕಿಕ ಕಾರ್ಯಗಳಲ್ಲಿ ತೊಡಗುವ ಮೊದಲು ಪವಿತ್ರವಾದ ಗಾಯತ್ರೀ ಮಂತ್ರವನ್ನು ತಪ್ಪದೆ ಜಪಿಸಬೇಕು.

'ಗೀ' ಅಂದರೆ ಗೀತಾಪಾರಾಯಣ .ಸಾಧ್ಯವಾದಷ್ಟು ಅರ್ಥಾನುಸಂಧಾನಪೂರ್ವಕ ಭಗವದ್ಗೀತೆಯನ್ನು ಪಠಿಸಬೇಕು.'ಗೋ'ಅಂದರೆ ಗೋವಿಂದ .ಅನುದಿನವೂ ಅನ್ಯಕಾರ್ಯನಿರತವಾಗಿರುವಾಗಲೂ ಕೂಡ ಗೋವಿಂದನನ್ನು ಸ್ಮರಿಸಬೇಕು.

ಈ ಅನುಷ್ಠಾನಗಳಿಂದ ನಮ್ಮ ಅಧ್ಯಾತ್ಮಿಕ ಉನ್ನತಿಯಾಗುತ್ತದೆ.ಜೀವನ ಸುಗಮವಾಗುತ್ತದೆ.ಕಷ್ಟಗಳು ಕರಗುತ್ತವೆ.

---

## ತಿಂಗಳ ಶುಭದಿನಗಳು

### ವಿಲಂಬಿ ನಾಮ ಸಂವತ್ಸರದ ದಕ್ಷಿಣಾಯನ ಗ್ರೀಷ್ಮ ಋತು –ಕರ್ಕಟ–ಸಿಂಹ

| | |
|---|---|
| 16–07–2018 | ಕರ್ಕಟ ಸಂಕ್ರಮಣ |
| 23–07–2018 | ಚಾತುರ್ಮಾಸ್ಯಾರಂಭ |
| 27–07–2018 | ಗುರುಪೂರ್ಣಿಮಾ |
| 29–07–2018 | ಚಂದ್ರಗ್ರಹಣ |
| 11–08–2018 | ಹೆಬ್ಬೂರು ಶ್ರೀ ಕಾಮಾಕ್ಷಿ ಶಾರದಾಂಬಾ ಮಠದಲ್ಲಿ ಋಕ್ ಸಂಹಿತಾ ಯಾಗ ಪ್ರಾರಂಭ |
| 15–08–2018 | ನಾಗರಪಂಚಮಿ,ಸ್ವಾತಂತ್ರ್ಯ ದಿನಾಚರಣೆ |
| 17–08–2018 | ಸಿಂಹ ಸಂಕ್ರಮಣ |

---

## ಸದಾಚಾರ

* ಬೇರೆಯವರ ಪಾದರಕ್ಷೆಗಳನ್ನು ಬಳಸಬಾರದು
* ಬೇರೆಯವರ ಬಟ್ಟೆಗಳನ್ನು ಹಾಕಬಾರದು
* ಬೈಯಬಾರದು
* ಚಾಡಿ ಹೇಳಬಾರದು
* ಯಾರನ್ನೂ ನಿಂದಿಸಬಾರದು
* ಯಾರ ಮನಸ್ಸಿಗೂ ನೋವಾಗುವಂತಹ ಮಾತನ್ನು ಆಡಬಾರದು
* ಕುಚೇಷ್ಟೆಗಾಗಿ ಮಣ್ಣಹೆಂಟೆಯನ್ನು ಒಡೆಯಬಾರದು
* ಗ್ರಹಣ ಸಮಯದಲ್ಲಿ ಸೂರ್ಯನನ್ನು ನೋಡಬಾರದು.



Scanned by CamScanner

# ಧಾರ್ಮಿಕ ಪ್ರಶ್ನೋತ್ತರಗಳು

## 1.ಸಂಸ್ಕಾರಗಳಲ್ಲಿ ಸ್ತ್ರಿಯರ ಪಾತ್ರವೇನು?

ಹಿಂದೂ ಸಂಸ್ಕೃತಿಯಲ್ಲಿ ಪುರುಷ ಹಾಗೂ ಸ್ತೀಯರಲ್ಲಿ ಸ್ತ್ರೀ ಶ್ರೇಷ್ಠಳು.ಗೃಹಿಣಿ ಇಲ್ಲದೆ ಗೃಹ ಆಗದು, 'ಚಕ್ರವರ್ತಿ ಆದರೂ ತಾಯಿಗೆ ಮಗನೇ, ಮಾತೃದೇವೋ ಭವ ಮೊದಲು ನಂತರ 'ಪಿತೃದೇವೋ ಭವ ,ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರದೇವತಾ ಎಂಬ ಶಾಸನಗಳೆಲ್ಲ ಸ್ತ್ರೀಪಾರಮ್ಯವನ್ನೇ ಹೇಳುತ್ತವೆ. ಸಂಸ್ಕಾರಗಳಲ್ಲೂ ಜನನ ಪೂರ್ವದ ಮೂರು ಸಂಸ್ಕಾರಗಳೂ ಸ್ತ್ರೀಯರಿಗಾಗೇ ಇವೆ.ಜಾತಕರ್ಮ,ನಾಮಕರಣ,ಅನ್ನಪ್ರಾಶನಗಳು ಮಗುವಿಗೆ ತಾಯಿಯ ಜೊತೆಯಲ್ಲಿ ಆಗುತ್ತದೆ. ಉಪನಯನ,ಸಮಾವರ್ತನ ,ವಿವಾಹಗಳು ಸ್ತ್ರೀ ಪುರುಷರಿಬ್ಬರಿಗೂ ಆಗಬೇಕು. ಮತ್ತು ವಿವಾಹಿತ ಪುರುಷನು ಯಾವುದೇ ಧಾರ್ಮಿಕ ಕಾರ್ಯ ಮಾಡಬೇಕಾದರೆ ಪತ್ನಿ ಜೊತೆಯಲ್ಲಿ ಇದ್ದು ನೆರವಾಗಬೇಕು ,ಸಾಕ್ಷಿಯಾಗಬೇಕು,ಗೃಹಸ್ಥನ ತೀರ್ಥಯಾತ್ರೆ ,ದಾನ ಅತಿಥಿ ಸತ್ಕಾರಗಳೆಲ್ಲ ಗೃಹಿಣಿಯ ಮೂಲಕವೇ ,ಅವಳ ಹಾರ್ದಿಕ ಬೆಂಬಲದಿಂದಲೇ ಆಗಬೇಕು.ಹಾಗಾಗಿಯೇ ವಿವಾಹ ಸಂದರ್ಭದಲ್ಲಿ ವರನಿಂದ ಮಾಡಿಸುವ ಸಂಕಲ್ಪದಲ್ಲಿ,ಧರ್ಮೇ ಚ ಅರ್ಥೇ ಚ ಕಾಮೇ ಚ ನಾತಿ ಚರಾಮಿ – ಧರ್ಮಾಥಕಾಮಗಳಲ್ಲಿ ನಿನ್ನನ್ನು ಮೀರಿ ನಡೆಯುವುದಿಲ್ಲ ಎಂದು ಪ್ರತಿಜ್ಞೆ ಮಾಡಿಸುತ್ತಾರೆ.

## 2.ಸಂಸ್ಕಾರಗಳು ಸಾಮಾಜಿಕ ಅವಶ್ಯಕತೆಗಳನ್ನು ಪೂರೈಸುವುವೇ?

ಸಂಸ್ಕಾರ ಪಡೆದ ವ್ಯಕ್ತಿಗಳ ಜೀವನವು ದೃಢವಾಗುತ್ತದೆ. ಉತ್ತಮ ವ್ಯಕ್ತಿಗಳುಳ್ಳ ಕುಟುಂಬವು ಉತ್ತಮ ಸಂಬಂದಗಳಿಂದಾಗಿ ಶಕ್ತಿಶಾಲಿ ಆಗುತ್ತದೆ. ಮೇಲ್ಪಂಕ್ತಿ ಆಗುತ್ತದೆ.ಸಮಾಜವನ್ನು ಸಮರ್ಥವಾಗಿ ಮಾಡುತ್ತದೆ..ಸಂಸ್ಕಾರಗಳಿಂದ ಮಕ್ಕಳಿಗೆ ತಮ್ಮ ಪೂರ್ವಜರ ನೆನಪು ಉಳಿಯುತ್ತದೆ.ಹಿಂದಿನ ಪೀಳಿಗೆಯ ಉತ್ತಮ ಪರಂಪರೆ ಮುಂದಿನ ಪೀಳಿಗೆಗೆ ದಾರಿದೀಪ ಆಗುತ್ತದೆ. 'ನಾನು' ನನ್ನದು 'ಎಂಬ ಭಾವ ಕಡಿಮೆ ಆಗಿ ನಾವು' ನಮ್ಮ ಎಂಬ ಸಮಷ್ಟಿ ಭಾವ ಮೂಡುತ್ತದೆ.ದೇವರ ಸೇವೆ,ಪುಣ್ಯಕಾರ್ಯಗಳ ಹೆಸರಿನಲ್ಲಿ ಸಮಾಜಕ್ಕಾಗಿ ಚಿಂತಿಸುವ ,ತ್ಯಾಗ ಮಾಡುವ ದೃಷ್ಟಿಯೂ ಬೆಳೆಯುತ್ತದೆ. ಇನ್ನೊಬ್ಬರಿಗೆ ಹಿತ ನೀಡುವುದೇ ಪುಣ್ಯ.ಪುಣ್ಯವನ್ನು ಮಾಡುತ್ತಲೇ ಇರಬೇಕು ಎಂದು ಅರಿತಾಗ ತಾನಾಗಿಯೇ ಸಮಾಜಕ್ಕಾಗಿ ದುಡಿಯುವ ದೃಷ್ಟಿ ಬರುತ್ತದೆ.

## 3.ಸಂಸ್ಕಾರಗಳ ನೈತಿಕ ಹಾಗೂ ಆಧ್ಯಾತ್ಮಿಕ ಸಾಮರ್ಥ್ಯಗಳೇನು?

ಸಂಸ್ಕಾರಗಳು ಶ್ರದ್ಧೆಯಿಂದ ಅನುಸರಿಸಬೇಕಾದವು.ಶ್ರದ್ಧೆಯಿರುವ ವ್ಯಕ್ತಿ ಸಮಾಜದೊಡನೆ ಬೇಗ ಹೊಂದಿಕೊಳ್ಳುತ್ತಾನೆ.ಸಂಸ್ಕಾರಗಳಿಂದ ಸತ್ಪ್ರವೃತ್ತಿಗಳು ಬೆಳೆದು ಸ್ವಾರ್ಥ, ಅಹಂಕಾರ ದೂರವಾಗುತ್ತವೆ. ತನ್ನ ಅಗತ್ಯಗಳೆಲ್ಲವನ್ನೂ ಆಹಾರ–ಆರೋಗ್ಯ,ವಿದ್ಯೆ,ಐಶ್ವರ್ಯ, ಸ್ಥಾನಮಾನಗಳು ಎಲ್ಲವನ್ನೂ ಧರ್ಮದ ಚೌಕಟ್ಟಿನೊಳಗೇ ಪಡೆಯಬಹುದು,ಪಡೆಯಬೇಕು ಎಂಬ ಆಕಾಂಕ್ಷೆಯನ್ನೂ ಸಂಸ್ಕಾರಗಳೇ ಒದಗಿಸುತ್ತವೆ. ವ್ಯಕ್ತಿಗಳ ವ್ಯಕ್ತಿತ್ವವನ್ನು ಅಡ್ಡಾದಿಡ್ಡಿ ಬೆಳೆಯಲು ಬಿಡದೆ ಅವನ ಚಾರಿತ್ರ್ಯವು ಯೋಗ್ಯ ದಿಕ್ಕಿನಲ್ಲಿಯೇ ವಿಕಾಸವಾಗಲು ಸಹಕರಿಸುತ್ತವೆ. ವ್ಯಕ್ತಿಯ ಸುಖದುಃಖಗಳ ಸಂದರ್ಭದಲ್ಲಿ ವ್ಯಕ್ತವಾಗುವ ಭಾವನೆಗಳು ಸಮಾಜಕ್ಕೆ ಹಿತಕರವಾಗಿರುವಂತೆ ದಾರಿ ತೋರುತ್ತದೆ.ಆಗ ಮಾನವನು ಪಶುತ್ವದಿಂದ ಮೇಲೇಳುವ ಸದ್ಗುಣಗಳು ಮೈತಾಳುತ್ತವೆ. ಕ್ರಮೇಣ ದೇವತ್ವಕ್ಕೇರುವ ಉನ್ನತ ಧಾರ್ಮಿಕ ಪ್ರಜ್ಞೆಯೂ ಅವನಲ್ಲಿ ಮೂಡುತ್ತದೆ. ಹೀಗೆ ಸಂಸ್ಕಾರಗಳು ಅಸಂಸ್ಕೃತನ ಶರೀರವನ್ನು ನಾಶ ಮಾಡದೆ ಅವನ ಶರೀರವು ಪವಿತ್ರವಾಗಿ ,ಉತ್ತಮ ಕಾರ್ಯವೊಂದಕ್ಕೆ ಯೋಗ್ಯ ಉಪಕರಣವಾಗುವಂತೆ ರೂಪಿಸುತ್ತವೆ.ಆಗ ಅವನೊಳಗಿನ ದೈವೀ ಶಕ್ತಿಯು ಸಹಜವಾಗಿ ಪ್ರಕಟವಾಗುತ್ತದೆ.



Scanned by CamScanner

ಜ್ಞಾನಪ್ರಶ್ನೆಗಳು

1. ಒಂದು ಗೋಡೆ ಗಡಿಯಾರ ಎರಡು ಗಂಟೆ ಹೊಡೆಯಲು ಎರಡು ಸೆಕೆಂಡ್ ತೆಗೆದುಕೊಂಡರೆ 3 ಗಂಟೆ ಹೊಡೆಯಲು ಎಷ್ಟು ಸೆಕೆಂಡ್ ಬೇಕು?

2.ಒಮ್ಮುಖ ಬೀದಿ (ಒನ್‌ವೇದಾರಿ)ಯ ಒಂದರ ಕೊನೆಯಲ್ಲಿ ಇಬ್ಬರು ಟ್ರಾಫ್ಫಿಕ್ ಪೋಲಿಸರು ನಿಂತಿದ್ದಾರೆ. ಒಬ್ಬ ಟ್ಯಾಕ್ಸಿ ಡ್ರೈವರ್ ತಪ್ಪು ದಾರಿಯಲ್ಲಿ ಬರುತ್ತಿರುವುದನ್ನು ನೋಡುತ್ತಾರೆ.ಆದರೆ ಅವನನ್ನು ನಿಲ್ಲಿಸಿ ಬಂಧಿಸುವುದಿಲ್ಲ ಏಕೆ?

ಉತ್ತರ: ಕೊನೆಯ ಪುಟದಲ್ಲಿದೆ

---

## ಆಗಸ್ಟ್ 5 ಭಾನುವಾರ –ಹೆಬ್ಬೂರು ಗುರುದರ್ಶನ ಯಾತ್ರೆ

ಆಗಸ್ಟ್ 4–ಶನಿವಾರ ರಾತ್ರಿ 10.00 ಗಂಟೆಗೆ ಜ್ಯೋತಿ ಆಸ್ಪತ್ರೆ ವಠಾರದಿಂದ ವಾಹನದ ವ್ಯವಸ್ಥೆಯಿರುತ್ತದೆ. ಋಕ್ ಸಂಹಿತಾ ಯಾಗ ಪೂರ್ಣಾಹುತಿ ಕಾರ್ಯಕ್ರಮದಲ್ಲಿ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

## ಆಗಸ್ಟ್ 11 ಶನಿವಾರ –ವಾರ್ಷಿಕ ಮಹಾಸಭೆ ಮತ್ತು ತಿಂಡಿ ಮೇಳ

ಆಗಸ್ಟ್ 11 ಶನಿವಾರ ಅಪರಾಹ್ನ 3.00 ಗಂಟೆಗೆ ಮಹಾಸಭೆ ನಡೆಯಲಿದೆ.ಅಪರಾಹ್ನ 4.00 ರಿಂದ ವಿಶೇಷ ತಿಂಡಿಮೇಳ ನಡೆಯಲಿದೆ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣೆ ನಡೆಯಲಿದೆ.ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸಬೇಕಾಗಿ ವಿನಂತಿ.

## ಟಿ .ಗಿರಿಜಾಶಂಕರರಿಗೆ ಅಭಿನಂದನೆ

ಪ್ರತಿಷ್ಠಿತ ಸುಳ್ಯ ರೋಟರಿ ಕ್ಲಬ್ ಚಾರಿಟೇಬಲ್ ಟ್ರಸ್ಟ್ ಸದಸ್ಯರಾಗಿ ಆಯ್ಕೆಗೊಂಡ ಟಿ.ಗಿರಿಜಾಶಂಕರ್‌ರಿಗೆ ಸಂಘದ ಪರವಾಗಿ ಅಭಿನಂದನೆಗಳು.ಅವರಿಗೆ ಉಜ್ವಲ ಅವಕಾಶಗಳು ಲಭಿಸಲಿ –ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಂಘ ಸುಳ್ಯ

## ಶ್ರೀ ಗಾಯತ್ರೀ ಹವನ

ದಿನಾಂಕ 13/05/2018 ರಂದು ಕಾಂತಮಂಗಲ ಶ್ರೀ ಸುಬ್ರಹ್ಮಣ್ಯ ದೇವಾಲಯದಲ್ಲಿ ಶ್ರೀ ಗಾಯತ್ರೀ ಹವನ ಸಂಪನ್ನಗೊಂಡಿತು. ಸುಳ್ಯ ತಾಲೂಕು ಸ್ಥಾನಿಕ ಬ್ರಾಹ್ಮಣ ಸಮಾಜ ಸೇವಾ ಸಂಘಧ ಪ್ರಾಯೋಜಕತ್ವದಲ್ಲಿ ಶ್ರೀ ಗಾಯತ್ರೀ ಪುರಶ್ಚರಣ ಯಜ್ಞದ ಸಮಾರೋಪವಾಗಿ ಈ ಹವನದಲ್ಲಿ ಬ್ರಹ್ಮಶ್ರೀ ವೇ। ಮೂ। ಪಾವಂಜೆ ಶ್ರೀ ವಾಗೀಶ ಶಾಸ್ತ್ರಿಯವರ ಪೌರೋಹಿತ್ಯದಲ್ಲಿ ನಡೆಸಲಾಯಿತು.ನಮ್ಮ ಸಮಾಜದ ಅನೇಕ ಬಂಧುಗಳು ಜಪಕರ್ತೃಗಳಾಗಿ ಆಗಮಿಸಿ,ಯಜ್ಞದಲ್ಲಿ ಹವಿಸ್ಸನ್ನು ಅರ್ಪಿಸಿ ಶ್ರೀ ಗಾಯತ್ರೀ ಮಹಾಮಂತ್ರದ ಜಪ ಮಹಿಮೆಯನ್ನು ಅನುಭವಿಸಿಕೊಂಡರು.ನಮ್ಮ ಸಮಾಜದ ಅನೇಕ ಬ್ರಹ್ಮಚಾರಿ ವಟುಗಳು ಭಾಗವಹಿಸಿ ವಿಶೇಷ ಅನುಭೂತಿಯನ್ನು ಪಡೆದುಕೊಂಡರು.ಪ್ರಾತಃಕಾಲ 6.30ಕ್ಕೆ ಪ್ರಾರಂಭಗೊಂಡ ಹವನ ಕಾರ್ಯವು ಮಧ್ಯಾಹ್ನ 12.00 ಗಂಟೆಯವರೆಗೆ ನಡೆದು ದ್ವಾದಶ ಸಹಸ್ರ ಆಹುತಿಯೊಂದಿಗೆ ಪೂರ್ಣಾಹುತಿ ಸಮರ್ಪಿಸಲಾಯಿತು.

ಶ್ರೀ ಶಂಕರಾಚಾರ್ಯ ಜಯಂತಿ ಆಚರಣೆಯ ಅಂಗವಾಗಿ ಶ್ರೀ ಶಂಕರಾಚಾರ್ಯ ಕಲ್ಪೋಕ್ತ ಪೂಜೆಯನ್ನು ನಡೆಸಲಾಯಿತು. ಬಳಿಕ ಧಾರ್ಮಿಕ ಸಭೆಯ ಅಧ್ಯಕ್ಷರಾದ ಟಿ.ಗಿರಿಜಾಶಂಕರ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಧಾರ್ಮಿಕ ಉಪನ್ಯಾಸವನ್ನು ತಂತ್ರಿಗಳಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳೂ ನೆರವೇರಿಸುವುದರೊಂದಿಗೆ ಶ್ರೀ ಗಾಯತ್ರೀ ಮಹಾಮಂತ್ರದ ವಿಶೇಷ ಮಹತ್ವವನ್ನು ಮನ ಪ್ರಚೋದನೆಗೊಳ್ಳುವಂತೆ ಮಂಡಿಸಿದರು. ಮುಖ್ಯ ಅಭ್ಯಾಗತರಾಗಿ ಆಗಮಿಸಿದ ಧರ್ಮಾಧಿಕಾರಿ ಶ್ರೀ ಸತ್ಯಶಂಕರ ಬೊಳ್ಳಾವರವರು ಶಂಕರಾಚಾರ್ಯರ ಕೊಡುಗೆಯನ್ನು ಸ್ಮರಿಸುತ್ತಾ ಶಂಕರಜಯಂತಿ ಆಚರಣೆಯ ಮಹತ್ವವನ್ನು ಸಾರಿ ಹೇಳಿದರು. ಮತ್ತೋರ್ವ ಮುಖ್ಯ ಅಭ್ಯಾಗತರಾಗಿ ಆಗಮಿಸಿದ ಮುಳ್ಳೇರಿಯ ಹವ್ಯಕ ಮಂಡಲದ ಅಧ್ಯಕ್ಷರಾದ ಟಿ. ಶ್ರೀ ಕೃಷ್ಣ ಭಟ್‌ರವರು ತಮ್ಮ ಧಾರ್ಮಿಕ ಅನುಭವದ ಸಿಂಚನವನ್ನು ಮಾಡಿದರು

Scanned by CamScanner

## ಗುರುವಾಣಿ

ಮಾನವ ಅತಿ ಚಿಕ್ಕ ಸಂಕಟಕ್ಕೇ ಮರುಗುವನು. ಏನಾದರೂ ಸಂಕಟ ಬಂದರೆ ಕ್ಲೇಶ ಪಡುವನು.ತನ್ನ ಹೊಟ್ಟೆ ತುಂಬಿಸಿಕೊಳ್ಳಲು ತಾನೂ ದುಡಿಯುವನು ಪರರನ್ನೂ ಕಷ್ಟಕ್ಕೆ ನೂಕುವನು.ಸುಖಕ್ಕೆ ಹಿಗ್ಗುವನು ದು–ಃಖಕ್ಕೆ ಬೇಸರಿಸುವನು.'ನಾನಿಷ್ಟು ಭಗವಂತನನ್ನು ನೆನೆದರೂ ಆ ಭಗವಂತನು ನನ್ನನ್ನೇಕೆ ಈ ಪರಿಯ ಕಷ್ಟಕ್ಕೆ ನೂಕಿದ್ದಾನೆ?' ಎಂಬುದಾಗಿ ಭಗವಂತನ ಕರುಣಾ ಕಟಾಕ್ಷವನ್ನೇ ಸಂದೇಹಿಸುವನು.ಆದರೆ,ತಾನು ಭಗವಂತನ ಸೃಷ್ಟಿಯೆಂಬುದನ್ನು ಅವನು ಕ್ಷಣ–ಕಾಲ ಮರೆಯುವನು.ಭಗವಂತ ನಮ್ಮನ್ನು ಹುಟ್ಟಿಸಿ ಈ ಭುವಿಗೆ ಕಳುಹಿಸುವಾಗ ನಮ್ಮನ್ನು ಯಾವ ರೀತಿ ಸಲಹಬೇಕೆಂಬುದನ್ನು ಲೆಕ್ಕಾಚಾರ ಹಾಕಿರುತ್ತಾನೆ. ಅವನ ಸೃಷ್ಟಿಯಲ್ಲಿ ಸಮಾನತೆಯಿದ್ದಂತೆ ಸೃಷ್ಟಿಯಲ್ಲಿ ಸಮತೆಯೂ ಇದೆ.ಆನೆಗೆ ಐದು ಮಣದ ಆಹಾರವನ್ನೂ ಒದಗಿಸಿ ಕೊಡುವವನು ಅವನೇ ಕೊಟ್ಟ ಸೌಭಾಗ್ಯವನ್ನೂ ಜೀವಿಗೆ ಅರಿಯದಂತೆಯೇ ಕಸಿದುಕೊಳ್ಳುವವನೂ ಅವನೇ .ಇದಕ್ಕೆ ಸೃಷ್ಟಿಸಿದ ಭಗವಂತನಲ್ಲಿರುವ ಸ್ಥಿತಿಶಕ್ತಿಯೇ ಕಾರಣ. 'ಸ್ಥಿತಿ ಎಂದರೆ ಯಥಾಯೋಗ್ಯ ಸಲಹುವುದು ಎಂದರ್ಥ.ನಿನ್ನ ಗುಣ–ಧರ್ಮ –ಯೋಗ್ಯತೆಗನುಸಾರವಾಗಿ ನಿನಗೆ ಯಾವುದು ಯಥಾಯೋಗ್ಯ'ವೋ ಅದನ್ನು ಒದಗಿಸುವ ಭಗವಂತ ಎಂದೂ ನಿನ್ನನ್ನು ಕೈಬಿಡನು .ನೀನು ಬೆಟ್ಟದ ಮೇಲಿದ್ದರೂ ವನದೊಳಿದ್ದರೂ ನಿನ್ನನ್ನು ಎಂದೂ ಕಷ್ಟಕ್ಕೆ ನೂಕದೇ ಅವನು ಪೊರೆಯುತ್ತಾನೆ. ನ ಮೇ ಭಕ್ತಃ ಪ್ರಣಶ್ಯತಿ ಈ ನಂಬಿಕೆ ನಿನ್ನಲ್ಲಿ ಸ್ಥಿರವಾಗಿರಲಿ ಆಗ ನಿನ್ನ ಆತ್ಮ ಸ್ಥೈರ್ಯದ ಮುಂದೆ ಭಗವಂತನೇ ಶರಣಾಗುತ್ತಾನೆ.

ಹುಟ್ಟೆನೆಂದೆನಲೇಕೆ ಕ್ಲೇಶಪಡುವುದು ಏಕೆ
ಹೊಟ್ಟೆ ಗೋಸುಗ ಪರರ ಕಷ್ಟಪಡಿಸಲೇಕೆ
ಬೆಟ್ಟದ ಮೇಲಿದ್ದರೇನು ವನದೊಳಿದ್ದರೇನು
ಹುಟ್ಟಿಸಿದ ದೇವರು ಹುಲ್ಲು ಮೇಯಿಸದಿರುವನೇ?
ದೃಢಯಾಗಿ ನೆರನಂಬು ಪುರಂದರ ವಿಠಲನ
ಸೃಷ್ಟಿ ಮಾಡಿದ ಬ್ರಹ್ಮ ಸ್ಥಿತಿ ಮಾಡಲರಿಯನೇ?

## ಸೂಕ್ತಿ ಸೌರಭ

ಮನುಷ್ಯ ಮಾತ್ರರಿಗೆಲ್ಲ ಕಷ್ಟನಷ್ಟಗಳೂ ರೋಗರುಜಿನಗಳೂ ಸಾವು–ನೋವುಗಳೂ ಬಂದೊದಗುವುದು ಸರ್ವೇಸಾಮಾನ್ಯ. ಆಗ ಅದಕ್ಕೆ ಕಾರಣವೇನಿರಬಹುದೆಂದು ಚಿಂತಿಸತೊಡಗಿದಾಗ,ನಾನಾ ಹಿರಿಯರನ್ನು ವಿಚಾರಿಸಿದಾಗ ,ಒಬ್ಬೊಬ್ಬರು ಒಂದೊಂದು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಅವೆಲ್ಲವೂ ಅಷ್ಟಿಷ್ಟು ಸತ್ಯವೇ ಆದರೂ ವಸ್ತುಸ್ಥಿತಿಯು ಇನ್ನೂ ಏನೋ ಇರುತ್ತದೆ. ಈ ತೆರೆದ ಚಿಂತನೆಯನ್ನು ಸಂಸ್ಕೃತ ಸುಭಾಷಿತವೊಂದು ಸಂಗ್ರಹಿಸಿರುವುದು ಹೀಗೆ

ವೇದ್ಯಾ ವದಂತಿ ಕಫಪಿತ್ತ ಮರುದ್ವಿಕಾರಾನ್
ಜ್ಯೋತಿರ್ವಿದೋ ಗ್ರಹಗತಿಂ ಪರಿವರ್ತಯಂತಿ
ಭೂತಾಭಿಷಂಗ ಇತಿ ಭೂತವಿದೋ ವದಂತಿ
ಪ್ರಾಚೀನಕರ್ಮ ಬಲವನ್ ಮುನಯೋ ವದಂತಿ

ವೈದ್ಯರು ವಾತಪಿತ್ತಕಫಗಳ ವಿಕಾರವಿದೆನ್ನುತ್ತಾರೆ. ಜ್ಯೋತಿಷಿಗಳು ಗ್ರಹಗತಿಗಳ ಪರಿಣಾಮವಿದೆಯೆಂದು ಲೆಕ್ಕ ಹಾಕುತ್ತಾರೆ. ದೆವ್ವಭೂತಗಳನ್ನು ಬಲ್ಲವರು ಇದೆಲ್ಲ ಭೂತಚೇಷ್ಟೆಯೆಂದು ಬಗೆಯುತ್ತಾರೆ ಜ್ಞಾನಿಗಳಾದರೋ ನಾವೇ ಮಾಡಿದ ಹಿಂದಿನ ಕರ್ಮವೇ ಎಲ್ಲಕ್ಕಿಂತ ಬಲಶಾಲಿಯೆಂದು ನುಡಿಯುತ್ತಾರೆ. ಆಯುರ್ವೇದದ ಪ್ರಕಾರ ಮೂರು ಧಾತುಗಳ ವಿಕಾರ ಅಥವಾ ವಿಷಮಸ್ಥಿತಿಯೇ ಎಲ್ಲಕ್ಕೂ ಕಾರಣ. ಜ್ಯೋತಿಷಿಗಳ ಕೈವಾಡವೇ ಎಲ್ಲವೆನ್ನುವುದು ಇನ್ನು ಕೆಲವರ ಅಂಬೋಣ .ತಿಳಿವಳಿಕಸ್ಥರ ಪ್ರಕಾರ ನಮ್ಮೆಲ್ಲ ಕಷ್ಟನಷ್ಟಗಳಿಗೂ ನಾವೇ ಕಾರಣ .ನಾವೇ ನಮ್ಮ ಕರ್ಮಕ್ಕೆ ಹೊಣೆಗಾರರು .ಕಾರಣವನ್ನು ನಮ್ಮಲ್ಲಿಯೇ ಇಟ್ಟುಕೊಂಡು ಅದನ್ನು ಬೇರೆಲ್ಲೋ ಹುಡುಕಹೊರಡುವುದು ವ್ಯರ್ಥ .ಕರ್ಮವು ಸಂಚಿತ.ಪ್ರಾರಬ್ಧ–ಸಂಚಿತ ಆಗಾಮಿ ಕರ್ಮಗಳೂ ಕಾರಣವಾಗಿರುತ್ತವೆಯಾದ್ದರಿಂದ ಆಗಾಮಿ ಕರ್ಮದ ಬಗ್ಗೆ ಆದಷ್ಟು ಎಚ್ಚರ ವಹಿಸುವುದು ಬರಲಿರುವ ಎಷ್ಟೋ ಸಮಸ್ಯೆಗಳಿಗೆ ಪರಿಣಾಮಕಾರಿ ಔಷಧವಾಗಿರುತ್ತದೆ.



Scanned by CamScanner

## ಚಂದಾದಾರರಾಗಲು ಈಗ ಅವಕಾಶ

ಸ್ಥಾನಿಕ ಸಂಪದ ಪತ್ರಿಕೆಯು ಅಜೀವ ಚಂದಾದಾರರಾಗಲು ರೂ .300ನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ.ಶ್ರೀ ಕೃಷ್ಣರಾವ್ ನಾವೂರು ಕೃಷ್ಣಕನ್ಸ್‌ಲ್ಟೆನ್ಸಿ ,ಹೋಟೆಲ್ ದ್ವಾರಕದ ಬಳಿ,ಮುಖ್ಯರಸ್ತೆ,ಸುಳ್ಯ ದ.ಕ –574239

## BHIM/APP/BANK ಮೂಲಕ ಕಳುಹಿಸುವ ವಿವರ

sri Subrahmanya Sthanika Samaja Seva Sanga (reg)Sullia
BANK : STATE BANK OF INDIA
A/C NO :64099891835
IFSC :SBIN0040225

ಸೂಚನೆ :BANK ಮಾಡಿದ Mobile fund Transfer ನಂತರ ಕೃಷ್ಣರಾವ್ 9448801833 or 9448549732 ಕ್ಕೆ Message ಮೂಲಕ ವಿಳಾಸ ಕಳುಹಿಸಿರಿ .ಮತ್ತು ದೂರವಾಣಿ ಕರೆ ಮಾಡಿರಿ

ಜಾಣಪ್ರಶ್ನೆಗಳು
ಉತ್ತರ :

1. ಟಾಕ್ಸಿ ಡ್ರೈವರ್ ಬರುತ್ತಿದ್ದುದ್ದು ಕಾಲ್ನಡಿಗೆಯಲ್ಲಿ
2. 4 ಸೆಕೆಂಡ್ ಒಂದು ಬಾರಿ ಬಾರಿಸುವುದಕ್ಕೂ ಇನ್ನೊಂದು ಬಾರಿ ಬಾರಿಸುವುದಕ್ಕೂ ಇರುವ ಅಂತರ 2 ಸೆಕೆಂಡುಗಳು



[redacted]

## ಸುಳ್ಯದ "ಸ್ಥಾನಿಕ ಸಂಪದ" ಪತ್ರಿಕೆಯು ಇ–ಮೊಬೈಲ್‌ನಲ್ಲಿ ಉಚಿತ

ಸುಳ್ಯದ ಸ್ಥಾನಿಕ ಬ್ರಾಹ್ಮಣ ಸಮಾಜದ ಮುಖವಾಣಿಯಾದ "ಸ್ಥಾನಿಕ ಸಂಪದ" ಪತ್ರಿಕೆಯು 12 ವರ್ಷಗಳಿಂದ ಪ್ರತಿ ತಿಂಗಳ 16 ರಂದು ಸುಂದರವಾಗಿ ಹೊರಬರುತ್ತಿವೆ.ಇದರಲ್ಲಿ ಶ್ರೀ ಶ್ರೀ ಭಾರತೀ ತೀರ್ಥ ಸ್ವಾಮಿಯವರ ಅನುಗ್ರಹ ಭಾಷಣ,ಪ್ರೇರಕ ಪ್ರಸಂಗಗಳು,ಪಂಚಾಂಗ,ಮಿನಿಕವನ 'ಗಳು,ಸಂಪಾದಕೀಯ,ಮಾಸಿಕ ಸಭೆಯ ವರದಿ,ಶುಭವಿವಾಹ, ಬ್ರಹ್ಮೋಪದೇಶ, ಗೃಹಾರಂಭ ಮೊದಲಾದ ವರದಿಗಳು ಇವೆ. ಜಗತ್ತಿನ ಯಾವುದೇ ಭಾಗದಲ್ಲಿರುವ ಸಮಾಜ ಬಾಂಧವರಿಗೆ ಉಚಿತವಾಗಿ ಇ–ಮೊಬೈಲ್ ಮೂಲಕ ಕಳುಹಿಸುತ್ತೇವೆ.ಆಸಕ್ತರು .ತಮ್ಮ ವಾಟ್ಸಾಪ್ ಮೊಬೈಲ್ ನಂಬರನ್ನು 9740206411ಗೆ ಮೇಸೆಜ್ ಮೂಲಕ ಕಳುಹಿಸಬಹುದು ಅಥವಾ sadashiva.dr @gmail.com ಗೆ ಇ–ಮೈಲ್ ಮೂಲಕ ಕಳುಹಿಸಬಹುದು.

## ನಿಮ್ಮ ಪತ್ರ

"ಸ್ಥಾನಿಕ ಸಂಪದ" ಪತ್ರಿಕೆಯ ಬಗ್ಗೆ, ಅದರಲ್ಲಿ ತಾವು ಕಂಡ ತಪ್ಪುಗಳು ಹಾಗೂ ಹೇಗೆ ಮಾಡಿದರೆ ಪತ್ರಿಕೆ 'ತಮಗೆ ಇಷ್ಟವಾಗಬಹುದೆಂದು ತಿಳಿಸಿರಿ.
SMS :9740206411/Whatsapp
Email:sadashiva.dr@gmail.com

ಗೌರವ ಸಂಪಾದಕರು : ಶ್ರೀ ರಾಜಾರಾಮ್ ಜ್ಯೋತಿಷ್ಯರು
ಸಂಪಾದಕರು : ಡಾ.ಸದಾಶಿವ ರಾವ್
ಸದಸ್ಯರು : ಶ್ರೀ ಬಯಂಬು ಭಾಸ್ಕರ ರಾವ್
ಶ್ರೀ ಐ.ಕೆ ರಾಮಚಂದ್ರ ರಾವ್
ಶ್ರೀ ಗಿರಿಜಾಶಂಕರ ತುದಿಯಡ್ಕ
ಶ್ರೀ ಜಯರಾಮ ರಾವ್ ಸಂಪಾಜೆ

PRINTED AND PUBLISHED BY DR SADASHIVA RAO ON BEHALF OF SRI ·RAHMANYA STHANIKA SAMAJA SEVA GA (R)SULLIA,D.K
AND PRINTED AT SAGAR COM- ·RS &DIGITAL STUDIO JYOTHI DING,JYOTHI CIRCLE SULLIA-574239 AND PUBLISHED AT SULLIA D.K -574239



Scanned by CamScanner